ಶ್ರೀ ಬಸವಲಿಂಗಪ್ಪ.—ವಾತ್ಸಲ್ಯದಿಂದ ಹಾಗೆ ಹೇಳಿದೆ. ಹೇಳಬಾರದೆಂದರೆ ನಾನು ಹೇಳುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ವಾತ್ಸಲ್ಯದಿಂದ ಹೇಳಿದರೆ ನಾನು ವಿರೋಧ ಮಾಡುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಆಯಿತು. ಆಮೇಲೆ ಹಲವಾರು ಅಳತೆಯ ಕೊಂಬುಗಳಿವೆ. ಐದಾರು ಅಡಿ ಉದ್ದದ ಕೊಂಬುಗಳಿವೆ. ಅವನ್ನು ಏನು ಮಾಡಬೇಕೆಂದು ಯೋಚನೆ ಮಾಡುತ್ತೇವೆ. ಈ ಕೊಂಬುಗಳನ್ನು ಅಲಂಕಾರ ದೃಷ್ಟಿಯಿಂದ ಯಾವರೀತಿ ಬಳಸಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಮುಖ್ಯ ಮಂತ್ರಿಗಳ ಕಾರ್ಯಾಲಯ, ಮಂತ್ರಿಗಳ ಕಾರ್ಯಾಲಯ, ವಿಧಾನಸಭೆ, ಸರ್ಕಾರದ ಇನ್ನಿತರ ಕಛೇರಿಗಳಲ್ಲಿ ಈ ಕೊಂಬುಗಳನ್ನು ಅಲಂಕಾರದ ರೂಪದಲ್ಲಿ ಎಕ್ಸಿಬಿಟ್ ಮಾಡಬೇಕೆಂಬುದು ನಮ್ಮ ಆಸೆ. ಅದು ಇನ್ನೂ ಪೂರ್ಣಗೊಂಡಿಲ್ಲ. ಆದರೆ ಬಗ್ಗೆ ತೀರ್ಮಾನ ತೆಗೆದುಕೊಂಡಾಗ ತಪ್ಪದೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಬಹಳ ಮುಖ್ಯವಾದ ಉಪ ಪ್ರಶ್ನೆ ಕೇಳುತ್ತಿದ್ದೇನೆ. ಅರಣ್ಯ ಸಚಿವರು ವೀರಪ್ಪನ್‌ನನ್ನು ೭ ದಿವಸದಲ್ಲಿ ಹಿಡಿಯುತ್ತೇವೆಂದು ಇಲ್ಲಿ ಹೇಳಿಕೆ ಕೊಟ್ಟಿದ್ದರು. ಮತ್ತು ಹೊರಗಡೆ ಸಹ ಹೇಳಿದ್ದರು. ವೀರಪ್ಪನ್ ಪ್ರಶ್ನೆಯನ್ನು ನಾನು ಎತ್ತಿರುವುದು.

ಅಧ್ಯಕ್ಷರು.—ಟೋಟಲಿ ಇರ್‌ರಿಲೆವೆಂಟ್.

ಶ್ರೀ ವಾಟಾಳ್ ನಾಗರಾಜ್.—ನೀವು ಹೀಗೆ ಹೇಳಿಬಿಟ್ಟರೆ ಹೇಗೆ ?

(ಗೊಂದಲ)

ಅಧ್ಯಕ್ಷರು.—ಮಾನ್ಯ ಸಿಂಧ್ಯಾರವರು ದೇಶಪಾಂಡೆಯವರ ಪರವಾಗಿ ಮುಂದಿನ ಪ್ರಶ್ನೆಯನ್ನು ಕೇಳಬಹುದು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಬೆಳೆಸಿದ ಸಸಿಗಳು

೫೧೪. ಶ್ರೀ ಆರ್ ವಿ. ದೇಶಪಾಂಡೆ (ಹಳಿಯಾಳ).—ಮಾನ್ಯ ಅರಣ್ಯ ಮತ್ತು ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಿಂದ ಕಳೆದ ೩ ವರ್ಷಗಳಲ್ಲಿ ಎಷ್ಟು ಸಸಿಗಳನ್ನು ನೆಡಲಾಗಿದೆ ?

ಆ) ಇದಕ್ಕಾಗಿ ವೆಚ್ಚವಾದ ಹಣವೆಷ್ಟು ?

ಇ) ಈ ಸಸಿಗಳ ಪೈಕಿ ಎಷ್ಟು ಸಸಿಗಳು ಬದುಕಿವೆ ?

ಈ) ಈ ವರ್ಷದ ಕಾರ್ಯಕ್ರಮವೇನು ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಗಳು).—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಿಂದ ಕಳೆದ ೩ ವರ್ಷಗಳಲ್ಲಿ ನೆಡಲಾದ ಸಸಿಗಳ ವಿವರಗಳು ಕೆಳಗಿನಂತಿದೆ.—

೧೯೮೭–೮೮	೧೯೯.೦೭೦	ಲಕ್ಷ ಸಸಿಗಳು
೧೯೮೮–೮೯	೧೧೪.೯೨೫	ಲಕ್ಷ ಸಸಿಗಳು
೧೯೮೯–೯೦	೧೧೧.೧೧೩	ಲಕ್ಷ ಸಸಿಗಳು
ಒಟ್ಟು	೪೨೫.೧೦೮	ಲಕ್ಷ ಸಸಿಗಳು

ಆ) ಈ ಸಸಿಗಳನ್ನು ನೆಡಲು ವೆಚ್ಚವಾದ ಹಣ :

೧೯೮೭–೮೮	೩೬೭.೦೫೬	ಲಕ್ಷ ರೂಗಳು
೧೯೮೮–೮೯	೨೮೪.೯೨೬	ಲಕ್ಷ ರೂಗಳು
೧೯೮೯–೯೦	೩೫೨.೭೫೨	ಲಕ್ಷ ರೂಗಳು
ಒಟ್ಟು	೧೦೦೪.೭೩೪	ಲಕ್ಷ ರೂಗಳು

ಇ) ಈ ಸಸಿಗಳ ಪೈಕಿ ಶೇಕಡಾ ೮೦ ರಿಂದ ೯೦ ರಷ್ಟು ಸಸಿಗಳು ಬದುಕಿವೆ. ಖಾಲಿ ಸ್ಥಳದಲ್ಲಿ ಉಳಿಕೆ ಪ್ರಮಾಣ ಶೇಕಡಾ ೯೦ರಷ್ಟು ಇದ್ದು ಆಂಡರ್ ಪ್ಲಾಂಟಿಂಗ್ ಕ್ಷೇತ್ರದಲ್ಲಿ ಶೇಕಡಾ ೮೦ರಷ್ಟು ಇವೆ

ಈ) ೧೯೯೦–೯೧ನೇ ಸಾಲಿನಲ್ಲಿ ೬೬೩೨ ಹೆಕ್ಟೇರು ಪ್ರದೇಶದಲ್ಲಿ ೧೦೫.೭೦ ಲಕ್ಷ ಸಸಿಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಈ ಉತ್ತರ ಕನ್ನಡ ಜಿಲ್ಲೆಯಲ್ಲಿ ನೆಟ್ಟಿರತಕ್ಕಂಥ ಸುಮಾರು ೪೨೫ ಲಕ್ಷ ಸಸಿಗಳಲ್ಲಿ ಶೇಕಡ ೮೦ ರಿಂದ ೯೦ರಷ್ಟು ಸರ್‌ವೈವ್ ಆಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದು ಯಾವ ಬೇಸಿಸ್ ಮೇಲೆ ಎನ್ನತಕ್ಕಂಥದ್ದು ಎಂದು ನನಗೆ ಅರ್ಥವಾಗುತ್ತಿಲ್ಲ. ಅದಕ್ಕೆ ಏನಾದರೂ ಬೇಸಿಸ್ ಇದೆಯೇ ? ಫಾರೆಸ್ಟ್ ಡಿಪಾರ್ಟ್‌ಮೆಂಟ್ ಏನಾದರೂ ಬೇಸಿಸ್‌ನ್ನು ಪಾಲೋ ಆಪ್ ಮಾಡಿದ್ದಾರೆಯೇ ? ಎರಡನೆಯದಾಗಿ ಈ ಸಸಿಗಳು ಸರ್‌ವೈವ್ ಆಗಿಲ್ಲ. ಸಸಿಗಳ ಪಕ್ಕದಲ್ಲಿ ಗುಂಡಿಗಳನ್ನು ತೋಡುತ್ತಾರೆ. ಆ ಗುಂಡಿಗಳನ್ನು ತೋಡಿ ಅದಕ್ಕೆ ಸ್ಯಾಂಡನ್ನು ಸಹಿತ ಹಾಕುತ್ತಾರೆ. ಇದು ತಪ್ಪಿ ಗವರ್ನಮೆಂಟಿಗೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಈ ಗುಂಡಿಗಳನ್ನು ತೋಡುವಾಗ ಬಹಳ ಅವ್ಯವಹಾರ ನಡೆಯುತ್ತದೆ. ಆ ಸ್ಯಾಂಡ್‌ಗಳನ್ನು ನೆಡುವಾಗ ಅಲ್ಲಿ ಸಿಕ್ಕಾಪಟ್ಟೆ ಹಣ ದುರುಪಯೋಗವಾಗುತ್ತಿದೆ. ಆರ್.ಎಫ್.ಓ.ಗಳು ಹಣವನ್ನು ನೇರವಾಗಿ ಕೊಡುತ್ತಿದ್ದಾರೆ. ಆ ಪದ್ಧತಿಯನ್ನು ನಿಲ್ಲಿಸಬೇಕು. ಆ ರೀತಿ ನಿಲ್ಲಿಸುವುದಕ್ಕೆ ಸಾಧ್ಯ ಇದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಈ ವಿವರಗಳನ್ನು ನಾನು ವರದಿಯಂ ಪ್ರಕಾರ ಕೊಟ್ಟಿದ್ದೇನೆ. ಈಗ ಹಲವಾರು ಬಾರಿ ನಾನು ಹೇಳಿಕೆಗಳನ್ನು ಕೊಟ್ಟಿದ್ದೇನೆ. ಈ ಸಾಮಾಜಿಕ ಅರಣ್ಯ ಯೋಜನೆಯ ಬಗ್ಗೆ ನಾನು ವಿವರ ಕೊಟ್ಟಿದ್ದೇನೆ. ಆಲ್ಲಿ ನೂರಕ್ಕೆ ನೂರು ಅಂಕ ಆಂಶಗಳು ಸರಿಯಾಗಿರುವುದಿಲ್ಲ ಎಂದು ಹೇಳಿ ನಾನು ಹಿಂದೆ ಹೇಳಿಕೆಯನ್ನು ಸಹಾ ಕೊಟ್ಟಿದ್ದೇನೆ. ಇತ್ತೀಚೆಗೆ ಒದಗಿಸಿರತಕ್ಕಂಥ ಅಂಕಿಅಂಶಗಳು ಏನಿವೆ ಇದನ್ನು ಅವರ ವರದಿಗಳ ಪ್ರಕಾರ ಕೊಟ್ಟಿದ್ದೇವೆ. ತಾವು ಹೇಳಿದ ಹಾಗೆ ಅರಣ್ಯಗಳಲ್ಲಿ ಈ ರೇಂಜ್ ಆಫೀಸರ್ಸ್ ಅವರಿಗೆ ಹಣವನ್ನು ಖರ್ಚು ಮಾಡತಕ್ಕಂಥ ಒಂದು ಅಧಿಕಾರ ಅವರಿಗೆ ಇರುವುದರಿಂದ ಮತ್ತೆ ನ್ಯೂನತೆಗಳು ಇರಲಿಕ್ಕೆ ಸಾಕು, ಇದ್ದೇ ಇರುತ್ತವೆ, ಅವರಿಗೆ ಸ್ವೇಚ್ಛೆಯಾಗಿ ಇಂಥ ಒಂದು ಅಧಿಕಾರವನ್ನು, ಆರ್ಥಿಕ ಅಧಿಕಾರವನ್ನು ಕೊಡುವುದು ಸರಿಯೇ ತಪ್ಪೆ ಎನ್ನತಕ್ಕಂಥ ನಾವು ಬಹಳ ತೀವ್ರವಾಗಿ ಯೋಚನೆ ಮಾಡುತ್ತಿದ್ದೇವೆ. ಇಂಥ ಸಣ್ಣ ಅಧಿಕಾರಿಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಒಂದು ಅವರಿಗೆ ಕೊಡುವುದು ಸರಿಯೇ ಎಂದು ಯೋಚಿಸುತ್ತಿದ್ದೇವೆ. ಇದನ್ನು ಇನ್ನೊಂದು ವಾರದಲ್ಲಿ ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ. ಅವರಿಗೆ ಮೇಲಧಿಕಾರಿಗಳಿಗೆ ಇಂಥ ಒಂದು ವ್ಯವಹಾರದ ಅಧಿಕಾರವನ್ನು ಕೊಡಬೇಕು ಅವರಿಗೆ ಕೊಡಬಾರದೇ ಎನ್ನುವುದನ್ನು ಯೋಚನೆ ಮಾಡುತ್ತಿದ್ದೇವೆ. ಇಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಆದು ಒಂದು ಕಾಡಿನ ಜಿಲ್ಲೆ. ಕಾಡಿನ ಜಿಲ್ಲೆಯಲ್ಲಿ ಎಷ್ಟು ತೋಡಿದರು ಎನ್ನತಕ್ಕಂಥದ್ದನ್ನು ಹುಡುಕುವುದಕ್ಕಾಗುವುದಿಲ್ಲ ಲೆಕ್ಕ ಹಾಕುವವರು ಅವರೇ, ಲೆಕ್ಕವನ್ನು ಕೊಡುವವರೂ ಕೂಡಾ ಅವರೆ ಆದುದರಿಂದ, ನಿಮ್ಮ ಸಂಶಯಕ್ಕೂ ನನ್ನ ಸಂಶಯಕ್ಕೂ ಏನೂ ವ್ಯತ್ಯಾಸ ಇಲ್ಲ. ಸರಿಯಾಗಿ ಮಾಡಲಿ ಎಂದು ನಾನು ಹೇಳಿದ್ದೇನೆ. ಆದಕ್ಕಾಗಿ ಸುಮಾರು ಹತ್ತು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈಗ ಸಾಮಾಜಿಕ ಅರಣ್ಯ ಯೋಜನೆಗಾಗಿ ಇದುವರೆಗೂ ೭೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದು ಎಷ್ಟು ಸರಿಯಾಗಿದೆ, ಎಷ್ಟು ಸರಿಯಾಗಿಲ್ಲ ಎನ್ನುವುದರ ಬಗ್ಗೆ ನನಗೂ ಸಂಶಯ ಉಂಟು. ಶ್ರೀಮಾನ್ ಸಿಂಧ್ಯರವರಿಗೂ ಸಂಶಯ ಉಂಟು ಎಂದು ಕಾಣುತ್ತದೆ ಈ ತನಿಖೆಗಾಗಿ 'ಆಡಿಟ್ ಸೆಲ್' ಎಂದು ಇರುವಂತೆ ಒಂದು ತನಿಖಾ ಸಮಿತಿಯನ್ನು ಮಾಡಿ ಆದರ ಮೂಲಕ ಹಣ ಸರಿಯಾಗಿ ಖರ್ಚು ಮಾಡಿದ್ದಾರೆಯೇ ಇಲ್ಲವೇ ಯಾರ್ಯಾರು ದುರುಪಯೋಗ ಮಾಡಿರುತ್ತಾರೆ, ಯಾರ್ಯಾರು ಸುಳ್ಳು ಲೆಕ್ಕಪತ್ರಗಳನ್ನು ಸೃಷ್ಟಿ ಮಾಡಿದ್ದಾರೆ ಎಂಬುದನ್ನೆಲ್ಲಾ ಪತ್ತೆ ಮಾಡಬೇಕೆಂದಿದ್ದೇವೆ. ಇಲ್ಲಿ ತನಿಖಾ ಸೆಲ್ ಎಂದರೆ, What do you call a "Flying Cell" I am going to constitute and ascertain what is true and what is false.

ಶ್ರೀ ಪಿ.ಜಿ.ಆರ್. ಸಿಂಧ್ಯ —ಮಾನ್ಯ ಅಧ್ಯಕ್ಷರೇ, ನಾನು ಪಂಂತ್ರಿಗಳಲ್ಲಿ ಹೇಳುವುದಕ್ಕೆ ಬಯಸಿದ್ದು ಏನೆಂದರೆ, ನಾನು ಅವರಿಗೆ ಸಲಹೆಗಳನ್ನು ಸಹಿತ ಕೊಟ್ಟಿದ್ದೇನೆ. ಈಗ ಆರ್.ಎಫ್.ಓ.ಗಳಿಗೆ ಹಣವನ್ನು ಖರ್ಚು ಮಾಡಲು ಕೊಟ್ಟಿರತಕ್ಕಂಥ ಪವರ್ಸನ್ನು ವಿತ್‌ಡ್ರಾ ಮಾಡಿ. ಏತಕ್ಕಾಗಿ ಹೇಳುತ್ತಿದ್ದೇನೆಂದರೆ ನಿಮ್ಮ ಇಲಾಖೆಯಲ್ಲಿ ವರ್ಗಾವಣೆಗಳು ಏನು ನಡೆದಿದೆ, ಇದರಲ್ಲಿ ಬೇಕಾದಷ್ಟು ಒತ್ತಡ ಬಂದಿರತಕ್ಕಂಥದು ಸೋಷಿಯಲ್ ಫಾರೆಸ್ಟ್ರೀಗೆ ಹಾಕಿ ಎಂದು ಹೇಳುತ್ತಾರೆ. ಸೋಷಿಯಲ್ ಫಾರೆಸ್ಟ್ರೀಗೆ ಹಾಕಿ ಎಂದು ಎಲ್ಲರೂ ಸಹಿತ ಬರುತ್ತಾರೆ. ಈ ಪವರ್ಸನ್ನು ವಿತ್‌ಡ್ರಾ ಮಾಡಿದರೆ ಇವರೆಲ್ಲರೂ ಮತ್ತೆ ಓಡಿ ಹೋಗುತ್ತೇವೆ ಎಂದು ಹೇಳುತ್ತಾರೆ. ಈ ಕೆಲಸವನ್ನು ಮಾಡಬೇಕು, ಇದನ್ನು ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ಕೇಳುತ್ತಿದ್ದೇನೆ, ಏತಕ್ಕೆಂದರೆ ಅವರಿಗೆ ಇನ್‌ಡಿಸ್ಕ್ರಿಮಿನೇಟ್ ಪವರ್ಸ್ ಇದೆ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೇ, ಈ ರೇಂಜ್ ಆಫೀಸರ್ಸ್ ವರ್ಗಾವಣೆ ಇದೆಯೆಲ್ಲಾ, ಈ ವರ್ಗಾವಣೆಯ ಬಗ್ಗೆ ಬಹಳ ಒತ್ತಡ ನನ್ನ ಮೇಲೆ. ಎಲ್ಲಿ ಟಿಂಬರ್ ಸಿಗುತ್ತದೆ, ಅಲ್ಲಿಗೇ ಪೋಸ್ಟ್ ಮಾಡಿ ಎಂದು ಒತ್ತಡ. ಎಲ್ಲೆಲ್ಲಿ ಬಹಳವಾಗಿ ಯಾರ್ಯಾರು ಫಾರೆಸ್ಟ್ ಕಂಟ್ರಾಕ್ಟ್ ಮಾಡುತ್ತಾರೆ, ಹಂಗಾಮಿ ಲೈಸನ್ಸ್‌ಗಳನ್ನು ತೆಗೆದುಕೊಂಡು ಯಾರು ಟಿಂಬರ್‌ಗಳನ್ನು ಸಾಗಾಣಿಕೆ ಮಾಡುತ್ತಾರೆ, ಅಂಥವರಿಗೆ ಅವರಿಗೆ ಬೇಕಾದ ರೇಂಜ್ ಆಫೀಸರ್ಸ್‌ಗಳು ಬೇಕಲ್ಲ. ಅದಕ್ಕಾಗಿ ನನ್ನ ಮೇಲೆ ಒತ್ತಡ ಬರುತ್ತಿದೆ. ಈಗ ನನ್ನ ಮೇಲೆ ಒಂದು ದೂರು ಹೇಳಿದರು. ವರ್ಗಾವಣೆಯಲ್ಲಿ ಹಣ ಮಾಡಿದರು ಎಂದು. ನಾನು ಬಹಳ ವಿನಯಪೂರ್ವಕವಾಗಿ ಹೇಳುತ್ತಿದ್ದೇನೆ. ಯಾರು ಆರೋಪಣೆ ಮಾಡಿದ್ದಾರೆ ಆ ಮನುಷ್ಯ ಮಾಫಿ ಲೈಸನ್ಸ್ ಹೋಲ್ಡರ್. ಯಾರು ರೇಂಜರ್ ಇದ್ದಾರೆ ಅವರು ಅಲ್ಲೇ ಹೆಗ್ಗಡ ದೇವನ ಕೋಟೆಯಲ್ಲಿಯೇ ಇದ್ದಾರೆ. ಅವರನ್ನು ಇಲ್ಲಿಗೇ ಹಾಕಿ ಎಂದು ಹೇಳಿದರು. ನಾನು ಆದರ ವಿವರವನ್ನು ಈ ಸದನಕ್ಕೆ ತಿಳಿಸುತ್ತೇನೆ. ಅವರು ಅಲ್ಲೇ ಇರಬೇಕು, ಅವರಿಗೆ ಅನುಕೂಲ ಆಗಬೇಕು ಎಂದು ಅವರನ್ನು ಅಲ್ಲೇ ಹಾಕಿ ಎಂದರು. ನಾನು ಹಾಕಲಿಲ್ಲ ನಾನು ಏನು ಮಾಡಿದೆ ಎಂದರೆ, ಎಲ್ಲಿ ಚಟ್ಟವಾದ ಕಾಡು ಇದೆ, ಕಾಡಿನಲ್ಲಿರತಕ್ಕ ರೇಂಜ್ ಆಫೀಸರ್‌ಗಳನ್ನು, ಫಾರೆಸ್ಟ್ ಆಫೀಸರ್‌ಗಳನ್ನು ತೆಗೆದು ಬೀದರ್ ಡಿಸ್ಟ್ರಿಕ್ಟ್‌ನಿಂದ ಹಂಚಿದ್ದೇನೆ. ಎಲ್ಲೆಲ್ಲಿ ಬಯಲು ಪ್ರದೇಶ ಇದೆ. ಅವರನ್ನು ಕಾಡಿನ ಪ್ರದೇಶಕ್ಕೆ ಮತ್ತು ಎಲ್ಲಿ ಸ್ಮಗ್ಲಿಂಗ್ ಜಾಗ ಇದೆ ಅಂಥಾದ್ದನ್ನು ತಡೆ ಹಿಡಿಯಲಿಕ್ಕೆ ಈ ರೀತಿ ಮಾಡಿದ್ದೇನೆ. ಸದಸ್ಯರಿಗೆ ಅನುಕೂಲ ಆಗದೇ ಹೋದರೆ ಲಂಚ ಹೊಡೆದಿದ್ದಾರೆ. ಅದಕ್ಕಾಗಿ ಹಾಕಿದ್ದಾರೆ ಎಂದು ಹೇಳುತ್ತಾರೆ. ನನ್ನ ಇಲಾಖೆಯ ವರ್ಗಾವಣೆಯಲ್ಲಿ ನನ್ನ ಮೇಲೆ ಆರೋಪಣೆ ಮಾಡಿದರು. ಮತ್ತು ಇಂಡಿಯಾ ದೇಶದ ಎಲ್ಲಾ ಪತ್ರಿಕೆಗಳಲ್ಲಿ ಈ ವಿಷಯ ಬಂದಿದೆ. Graft charges are made against the Forest Minister Sri B. Basavalingappa I saw it in Delhi. They are simply allegations. ನಾನು ಬಹಳ ವಿನಯಪೂರ್ವಕವಾಗಿ ಹೇಳುತ್ತೇನೆ ಸಿಂಪಲ್ ಪ್ರೊಸೀಜರ್ ಪ್ರಕಾರ ಯಾರಾದರೂ ದೂರು ಹೇಳಿದರೆ ಹಾಗೂ ನಿಂದನೆ ಮಾಡುವಾಗ ಅವರು ರೈಟಿಂಗ್‌ನಲ್ಲಿ ಕೊಡಬೇಕು. ಅವರು ತಮ್ಮ ಪರವಾನಗಿಯನ್ನು ತೆಗೆದುಕೊಳ್ಳಬೇಕು. ಆದರೆ ತಮ್ಮ ಪರವಾನಗಿಯನ್ನು ತೆಗೆದುಕೊಳ್ಳದೆ ಅವರು ಲಂಚ ತೆಗೆದುಕೊಂಡಿದ್ದಾರೆ ಎಂಬ ವಾದವನ್ನು ಏನು ತೂಕಕ್ಕಿದ್ದಾರೆ. ಇಂಥಾದ್ದಕ್ಕೆ ದಯವಿಟ್ಟು ತಾವು ಅಧ್ಯಕ್ಷರಾಗಿರುವವರಿಗೆ ಅವಕಾಶ ಕೊಡಕೂಡದು ಎಂದು ಬಹಳ ವಿನಯ ಪೂರ್ವಕವಾಗಿ ಹೇಳುತ್ತಿದ್ದೇನೆ. ಅವರು ಮಾಡಿದ್ದು ಪ್ರೊಸೀಜರ್ ಪ್ರಕಾರ ಸರಿ ಇಲ್ಲ ಆದಕ್ಕೆ ವಿರುದ್ಧವಾಗಿದೆ. ಆವರು ಏನು ಅಲಿಗೇಷನ್ಸ್ ಮಾಡಿದರು ಅದು without any basis. ಅದನ್ನು ತಾವು ಕಡತದಿಂದ ತೆಗೆದು ಹಾಕಿಸಬೇಕೆಂದು ಕೇಳಿಕೊಳ್ಳುತ್ತೇನೆ.

ತಳಿ ಅಭಿವೃದ್ಧಿ ಕೇಂದ್ರ ಸ್ಥಾಪನೆ

೫೭೪. ಶ್ರೀ ಬಿ.ಹೆಚ್. ಯಂಕಾನಾಯ್ಕ (ಹರಪನಹಳ್ಳಿ).— ಮಾನ್ಯ ಅರಣ್ಯ ಮತ್ತು ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಪನಹಳ್ಳಿಯಲ್ಲಿ ತಳಿ ಅಭಿವೃದ್ಧಿ ಕೇಂದ್ರವನ್ನು ತೆರೆಯಲು ಸುಮಾರು ೮ ವರ್ಷಗಳ ಹಿಂದೆ ವೀರಭದ್ರಪ್ಪಗೌಂಗಡಿ ಎಂಬುವರು ಒಂದು ಎಕರೆ ಜಮೀನನ್ನು ಉಚಿತವಾಗಿ ಸರ್ಕಾರಕ್ಕೆ ದಾನ ಮಾಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಅದನ್ನು ತೆರೆಯದಿರಲು ಕಾರಣವೇನು?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನಾ ಮಂತ್ರಿಗಳು).—

ಅ) ಹೌದು.

ಆ) ಸಾಕಷ್ಟು ಹಣಕಾಸಿನ ವ್ಯವಸ್ಥೆ ಇಲ್ಲದಿರುವುದರಿಂದ.

ಶ್ರೀ ಬಿ. ಹೆಚ್. ಯಂಕಾನಾಯ್ಕ್. ಮಾನ್ಯ ಅಧ್ಯಕ್ಷರೇ, ನನಗೆ ಉತ್ತರ ಬಂದಿಲ್ಲ. ಒಂದು ಎಕರೆ ಜಮೀನು ಸರ್ಕಾರದ ಸ್ವಾಧೀನಕ್ಕೆ ಬಂದಿದೆಯೇ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.— ನೀವೇ ಓದಿಕೊಳ್ಳಿ.